


ಇವರೇ ಟೋಕಿಯೊ ಒಲಿಂಪಿಕ್ಸ್‌ನ ಭಾರತದ ಸಾಧಕರು








ಹೊನಲಾಗಿ ಹರಿಯುವಂತೆ ಮಾಡಿದರು.

23 ವರ್ಷದ ಹುಡುಗನ ಸಾಧನೆಗೆ ದೇಶಕ್ಕೆ ದೇಶವೇ ಸಂಭ್ರಮಿಸಿತು. ಶತಮಾನದಿಂದ ಅಥ್ಲೆಟಿಕ್ಸ್‌ನಲ್ಲಿ ಭಾರತಕ್ಕೆ ಕಾಡುತ್ತಿದ್ದ ಪದಕದ ನಿರೀಕ್ಷೆಗೆ ನೀರಜ್ 'ಬಂಗಾರದ ಎಸೆತ'ದ ಮೂಲಕ ಹೊಸ ಕಾಣಿಕೆ ಕೊಟ್ಟರು. ಒಲಿಂಪಿಕ್ಸ್ ಮುಗಿಯಲು ಒಂದು ದಿನವಷ್ಟೇ ಬಾಕಿಯಿದ್ದಾಗ ಭಾರತದ ಎಲ್ಲ ಕ್ರೀಡಾಪ್ರೇಮಿಗಳು ನೀರಜ್ ಮೇಲೊಂದು ಕಣ್ಣಿಟ್ಟಿದ್ದರು. ಅರ್ಹತಾ ಸುತ್ತಿನಲ್ಲಿ ಅವರು ತೋರಿದ ಪ್ರದರ್ಶನ ಇದಕ್ಕೆ ಕಾರಣವಾಗಿತ್ತು. ಭಾರತದ ಕೋಟ್ಯಂತರ ಕ್ರೀಡಾಪ್ರೇಮಿಗಳ ನಿರೀಕ್ಷೆ ಹುಸಿಯಾಗಲಿಲ್ಲ.

ಒಲಿಂಪಿಕ್ಸ್‌ನಲ್ಲಿನ ಸಾಧನೆಯಿಂದಾಗಿ ಯೋಧ ನೀರಜ್ ಚೋಪ್ರಾ ರಾತ್ರೋ ರಾತ್ರಿ ಭಾರತೀಯರ ಕಣ್ಮಣಿಯಾದರು. ದೇಶದ ಹೆಸರಾಂತ ಕ್ರೀಡಾಪಟುಗಳು, ರಾಜಕಾರಣಿಗಳು, ಉದ್ಯಮಿಗಳು ಸಾಧನೆಗೆ ಸಲಾಂ ಎಂದರು. ಈ ಸಾಧನೆಗೆ ನೀರಜ್ ಪಟ್ಟ ಶ್ರಮ, ವಿವಿಧ ವಯೋಮಿತಿಯೊಳಗಿನ ಟೂರ್ನಿಗಳಲ್ಲಿ ತೋರಿಸಿದ ಸಾಮರ್ಥ್ಯ ಕಾರಣವಾಯಿತು.

2016ರ ಜೂನಿಯರ್ ವಿಶ್ವಕಪ್‌ನಲ್ಲಿ ನೀರಜ್ ಭಾರತಕ್ಕೆ ಮೊದಲ ಚಿನ್ನದ ಪದಕ ತಂದುಕೊಟ್ಟಿದ್ದರು. 86.48 ಮೀ ದೂರ ಎಸೆದು 20 ವರ್ಷದೊಳಗಿನವರ ವಿಭಾಗದಲ್ಲಿ ವಿಶ್ವದಾಖಲೆಯನ್ನೂ ಮುರಿದಿದ್ದರು. ಮರು ವರ್ಷವೇ ಏಷ್ಯನ್ ಅಥ್ಲೆಟಿಕ್ ಚಾಂಪಿಯನ್‌ಷಿಪ್‌ನಲ್ಲಿ ಸ್ವರ್ಣ ಸಾಧನೆ ಮಾಡಿದರು.

2018ರಲ್ಲಿ ಗೋಲ್ಡ್ ಕೋಸ್ಟ್‌ನಲ್ಲಿ ನಡೆದ ಕಾಮನ್‌ವೆಲ್ತ್ ಕ್ರೀಡಾಕೂಟದ ಜಾವೆಲಿನ್ ಎಸೆತದಲ್ಲಿ ಚಿನ್ನ ಜಯಿಸಿ ಈ ಸಾಧನೆ ಮಾಡಿದ ಮೊದಲ ಭಾರತೀಯ ಎನ್ನುವ ಹೆಗ್ಗಳಿಕೆಗೆ ಪಾತ್ರರಾದರು. ಇದಾದ ಕೆಲ ತಿಂಗಳಲ್ಲೇ ಏಷ್ಯನ್ ಕ್ರೀಡಾಕೂಟದಲ್ಲಿ ಚಿನ್ನ ಜಯಿಸಿ ತಮ್ಮದೇ ದಾಖಲೆ ಉತ್ತಮ ಪಡಿಸಿಕೊಂಡರು. ಹಿಂದಿನ ಎಲ್ಲ ಅನುಭವಗಳ ಬಲ ನೀರಜ್‌ಗೆ ಒಲಿಂಪಿಕ್ಸ್‌ನಲ್ಲಿ ಸ್ವರ್ಣವಾಗಿ ಕಂಗೊಳಿಸಿತು.

## ಹಾಕಿಯ ಕಂಚು ಚಿನ್ನಕ್ಕಿಂತಲೂ ಹೆಚ್ಚು

ಒಲಿಂಪಿಕ್ಸ್ ಇತಿಹಾಸದ ಪುರುಷರ ಹಾಕಿಯಲ್ಲಿ ಹೆಚ್ಚು ಪದಕಗಳನ್ನು ಗೆದ್ದ ದಾಖಲೆ ಭಾರತದ ಹೆಸರಿನಲ್ಲಿದೆ. ಭಾರತ (ಎಂಟು), ಜರ್ಮನಿ (ನಾಲ್ಕು), ಪಾಕಿಸ್ತಾನ ಮತ್ತು ಗ್ರೇಟ್ ಬ್ರಿಟನ್ (ತಲಾ ಮೂರು) ಚಿನ್ನದ ಪದಕಗಳನ್ನು ಜಯಿಸಿವೆ.

1980ರ ಬಳಿಕದ ಒಲಿಂಪಿಕ್ಸ್ ಹಾಕಿಯಲ್ಲಿ ಭಾರತ ಪದಕ ಗೆಲ್ಲುವುದು ನಿಶ್ಚಿತ ಎನ್ನುವ ದೃಢ ಮನೋಭಾವ ಭಾರತೀಯರದ್ದಾಗಿತ್ತು. ಆದರೆ ಭಾರತದ ನಿರಂತರ ಕಳಪೆ ಪ್ರದರ್ಶನದಿಂದಾಗಿ ಪದಕದ ಆಸೆಯನ್ನೇ ಕೈ ಬಿಟ್ಟಿದ್ದರು. ಇದೆಲ್ಲಕ್ಕಿಂತ ಹೆಚ್ಚಾಗಿ 2008ರ ಬೀಜಿಂಗ್ ಒಲಿಂಪಿಕ್ಸ್‌ಗೆ ಭಾರತ ಅರ್ಹತೆಯನ್ನೇ ಪಡೆದಿರಲಿಲ್ಲ. ಇದು ಅಂತರರಾಷ್ಟ್ರೀಯ ಮಟ್ಟದಲ್ಲಿ ದೊಡ್ಡ ಚರ್ಚೆಯಾಯಿತು. ಭಾರತದ ಕ್ರೀಡಾಪ್ರೇಮಿಗಳ ಪಾಲಿಗೆ ಅವಮಾನವೆನಿಸಿತು. ಆದರೆ, ಭಾರತದ ಆಟಗಾರರು ಟೋಕಿಯೊದಲ್ಲಿ ಅಚ್ಚರಿಯ ಫಲಿತಾಂಶ ನೀಡಿದರು. ಬಲಿಷ್ಠ ರಾಷ್ಟ್ರಗಳ ಎದುರು ಗೆಲುವಿನ ಕೇಕೆ ಹಾಕಿ ಕಂಚಿನ ಪದಕ ಗೆದ್ದುಕೊಂಡರು.

ಏಷ್ಯಾದ ರಾಷ್ಟ್ರಗಳ ಟೂರ್ನಿಗಳಲ್ಲಿ ಭಾರತ ಯಾವಾಗಲೂ ಪಾರಮ್ಯ ಮೆರೆಯುತ್ತಲೇ ಬಂದಿದೆ.